# ಕನ್ನಡ ಭಕ್ತಿ ಸಾಹಿತ್ಯ ಮತ್ತು ವರ್ತಮಾನದ ತಲ್ಲಣಗಳು

**ಅರವಿಂದ ಕೆ. ಪೂಜಾರ***

**DOI: https://doi.org/10.5281/zenodo.21438358**

**ABSTRACT**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಭಕ್ತಿ ಸಾಹಿತ್ಯವು ಜನಪದರ ಪ್ರಕೃತಿ ಆರಾಧನೆಯಿಂದ ಹಿಡಿದು 12ನೇ ಶತಮಾನದ ವಚನ ಚಳುವಳಿ, ದಾಸ ಸಾಹಿತ್ಯ ಹಾಗೂ ತತ್ವಪದಗಳ ಮೂಲಕ ಸಾಮಾಜಿಕ ಕ್ರಾಂತಿಯನ್ನೇ ಸೃಷ್ಟಿಸಿದೆ. ಶರಣರ ಕಾಯಕ ನಿಷ್ಠೆ, ಸಮಾನತೆ ಮತ್ತು ಮಾನವೀಯ ಮೌಲ್ಯಗಳು ಅಂದಿನ ಶ್ರೀಸಾಮಾನ್ಯನಿಗೂ ಆಶಾಕಿರಣವಾಗಿದ್ದವು. ಆದರೆ, ಇಂದಿನ ಆಧುನಿಕ ಯುಗದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಎಷ್ಟೇ ಬೆಳೆದಿದ್ದರೂ; ಭ್ರಷ್ಟಾಚಾರ, ದೌರ್ಜನ್ಯ, ಜಾತೀಯತೆ ಹಾಗೂ ಯುದ್ಧಗಳಂತಹ ವರ್ತಮಾನದ ತಲ್ಲಣಗಳು ಮಾನವ ಕುಲವನ್ನು ತೀವ್ರವಾಗಿ ಕಾಡುತ್ತಿವೆ. ಮೌಲ್ಯಗಳ ಅಧಃಪತನದಿಂದಾಗಿ ಸಮಾಜವು ಕ್ರೂರತೆಯತ್ತ ಸಾಗುತ್ತಿದೆ. ಇಂತಹ ದೈನಂದಿನ ಆತಂಕಗಳು, ಅಸಮಾನತೆ ಹಾಗೂ ಕ್ಷೋಭೆಗಳಿಂದ ಹೊರಬಂದು ಜಗತ್ತಿನಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಮರುಸ್ಥಾಪಿಸಲು, ನಮ್ಮ ದಾರ್ಶನಿಕರು ಅಂದು ರೂಪಿಸಿದ ಭಕ್ತಿ ಸಾಹಿತ್ಯದ ಮಾನವೀಯ ಮೌಲ್ಯಗಳೊಂದಿಗೆ ಮರು-ಅನುಸಂಧಾನ ನಡೆಸುವುದು ಇಂದಿನ ತುರ್ತು ಅಗತ್ಯವಾಗಿದೆ.

**KEYWORDS:** ಕನ್ನಡ ಭಕ್ತಿ ಸಾಹಿತ್ಯ, ವಚನ ಚಳುವಳಿ, ವರ್ತಮಾನದ ತಲ್ಲಣಗಳು, ಮಾನವೀಯ ಮೌಲ್ಯಗಳು, ಸಾಮಾಜಿಕ ಅಸಮಾನತೆ.

ನಮ್ಮ ಕನ್ನಡ ನಾಡಲ್ಲಿ ಭಕ್ತಿ ಸಾಹಿತ್ಯ ಬೆಳೆದು ಬಂದುದನ್ನು ನಿಖರವಾಗಿ ಹೇಳುವುದು ತುಂಬಾ ಕಷ್ಟದ ಕೆಲಸ. ಒಟ್ಟಾರೆಯಾಗಿ ಅದನ್ನು ಹೀಗೆ ಹೇಳಬಹುದಾಗಿದೆ. ಮನುಷ್ಯನ ಹುಟ್ಟಿನ ಜೊತೆ ಜೊತೆಯೇ ಭಕ್ತಿ ಸಾಹಿತ್ಯ ಬೆಳೆದು ಬಂದಂತಿದೆ. ಕಾರಣ ಅನಾಗರಿಕನಾಗಿದ್ದ ಮನುಷ್ಯ ಸೃಷ್ಟಿಯಲ್ಲಾಗುವ ವೈಚಿತ್ರಗಳನ್ನು ಕಂಡು ಭಯಭೀತನಾಗಿರಬೇಕು. ಆ ಭಯವನ್ನು ಹೋಗಲಾಡಿಸುವುದಕ್ಕೆ ಅವನು ಅಗೋಚರಶಕ್ತಿ ಮತ್ತು ಪ್ರಕೃತಿಯ ಆರಾಧನೆಗೆ ಮುಂದಾಗಿ ಭಕ್ತಿಯ ಸಮರ್ಪಣೆ ಮಾಡಿದಂತಿದೆ. ಹೀಗೆ ಮಾಡುತ್ತ ಮಾಡುತ್ತ ಅವನು ಭಯದಿಂದ ಆಪತ್ತಿನಿಂದ ಬಿಡುಗಡೆ ಹೊಂದಿದೆನೆಂದು ಭಾವಿಸಿದಂತಿದೆ. ಅವನ ಈ ಭಕ್ತಿಯ ಪಾರಮ್ಯವನ್ನು

* **ಡಾ. ಅರವಿಂದ ಕೆ. ಪೂಜಾರ,** ಮುಖ್ಯಸ್ಥರು, ಕನ್ನಡ ವಿಭಾಗ, ಕೆ.ಎಸ್.ಎಸ್. ಕಲಾ, ವಾಣಿಜ್ಯ, ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ.

ನಮ್ಮ ಜನಪದ ಹಾಡಿನಿಂದ ಅರಿಯಬಹುದಾಗಿದೆ.

**"ಏಳುತಲೇ ಎದ್ದು ಯರ್‌ಯಾರ ನೆನೆಯಲಿ**
**ಎಳ್ಳು ಜೀರಿಗೆ ಬೆಳೆಯೋಳ ಎಳ್ಳು ಜೀರಿಗೆ ಬೆಳೆಯೋಳ**
**ಭೂ ತಾಯಿ ಎದ್ದೊಂದು ಗಳಿಗೆ ನೆನೆದೆನ"**

ನಮ್ಮ ಜನಪದರ ಜೀವನಾನುಭವ ತುಂಬ ಮಹತ್ತರವಾದುದು. ಭೂಮಿ ಎಲ್ಲ ಜೀವ ಸಂಕುಲಗಳಿಗೆ ತಾಣವಾಗಿದೆ. ಜೊತೆಗೆ ಅದಕ್ಕೆ ಸೃಜಿಸುವ ಶಕ್ತಿ ಇದೆ. ಅದಕ್ಕಾಗಿಯೇ ನಮ್ಮ ಜನಪದರು ಬೆಳಿಗ್ಗೆದ್ದು ಅವಳನ್ನು ಅಂದರೆ ಭೂತಾಯಿಯನ್ನು ನೆನೆಯುವುದರ ಜೊತೆಗೆ ಪೂಜಿಸುವವರು ಕೂಡ ಆಗಿದ್ದಾರೆ. ನಮ್ಮ ಜನಪದರು ಸೃಷ್ಟಿ ಮತ್ತು ಭೂಮಿತಾಯಿಯನ್ನು ಮಾತ್ರ ಪೂಜಿಸುವವರಲ್ಲ. ಹೊರತಾಗಿ ಏನೆಲ್ಲವನ್ನು ದೈವ ಸ್ವರೂಪವಾಗಿ ಕಾಣುವವರಾಗಿದ್ದಾರೆ. ಅಂತೆಯೇ ಈ ಜಗತ್ತನ್ನು ಪೊರೆಯುವ ಶಿವನ ಸ್ತುತಿ ಮಾಡುವುದರ ಜೊತೆಗೆ ಆ ದಿವ್ಯ ಶಕ್ತಿಗೆ ಭಕ್ತಿಯನ್ನು ಸಮರ್ಪಿಸುವವರಾಗಿದ್ದಾರೆ. ಅದನ್ನು ಮತ್ತೊಂದು ಜನಪದದ ಹಾಡಿನೊಂದಿಗೆ ಅರಿಯಬಹುದಾಗಿದೆ.

**"ಸೋಜುಗಾದ ಸೂಜು ಮಲ್ಲಿಗೆ**
**ಮಾದೇವ ನಿಮ್ಮ ಮಂಡೆ ಮ್ಯಾಲೆ ದುಂಡು ಮಲ್ಲಿಗೆ**
**ಅಂದಾವರೆ ಮುಂದಾವರೆ ಮತ್ತೆ ತಾವರೆ ಪುಷ್ಪ**
**ಚಂದಕ್ಕೆ ಮಾಲೆ ಬಿಲ್ಪತ್ರೆ ಮಾದೇವ ನಿಮಗೆ**
**ಸೋಜುಗಾದ ಸೂಜು ಮಲ್ಲಿಗೆ...."**

ಹೀಗೆ ನಮ್ಮ ಜನಪದರು ಶಿವನಿಗೆ ಈ ಎಲ್ಲ ಪರಿಕರಗಳನ್ನು ಅರ್ಪಿಸುತ್ತ, ತಮ್ಮ ಭಕ್ತಿಯನ್ನು ಸಮರ್ಪಿಸುವವರಾಗಿದ್ದಾರೆ.

ಇಂತಹ ಭಕ್ತಿ ಪಾರಮ್ಯತೆಯನ್ನು ನಾವು ಪರಂಪರಾಗತವಾಗಿ ಶೈವ, ಬೌದ್ಧ, ಜೈನ ಮುಂತಾದ ಧರ್ಮಗಳನ್ನೊಳಗೊಂಡು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಮತ್ತು ವರ್ತಮಾನದಲ್ಲೂ ಇದನ್ನು ಕಾಣಬಹುದಾಗಿದೆ. ಹೀಗೆಲ್ಲ ಹೇಳಿದಾಗಲೂ ಕನ್ನಡ ಭಕ್ತಿ ಸಾಹಿತ್ಯ ಬಹು ದೊಡ್ಡ ಪ್ರಖರತೆಯನ್ನು ಪಡೆದುಕೊಂಡಿದ್ದು 12ನೇ ಶತಮಾನದಲ್ಲಿ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇನ್ನೊಂದು ಮುಖ್ಯ ಅಂಶವೆಂದರೆ ಮಧ್ಯಕಾಲೀನ ಕನ್ನಡ ಸಾಹಿತ್ಯದ ಹರವು ಉಳಿದೆಲ್ಲ ಸಾಹಿತ್ಯಕ್ಕಿಂತ ಹಿರಿದು. 12ನೇ ಶತಮಾನದಿಂದ 19ನೇ ಶತಮಾನದವರೆಗೆ ಇದನ್ನು ಗುರುತಿಸಲಾಗಿದೆ.

ಕನ್ನಡ ನಾಡಲ್ಲಿ ಮೊದಲಿಗೆ ಭಕ್ತಿ ಸಾಹಿತ್ಯ ಬೆಳೆದು ಬಂದುದು ಒಂದು ತೆರನಾದರೆ, ಕನ್ನಡ ಭಕ್ತಿ ಸಾಹಿತ್ಯ ಬೆಳೆದು ಬಂದುದು ಮತ್ತೊಂದು ತೆರನಾಗಿದೆ. ಶರಣ, ಶರಣೆಯರ ವಚನಗಳ ಮೂಲಕ ಪ್ರಾರಂಭಗೊಂಡ ಕನ್ನಡ ಭಕ್ತಿ ಸಾಹಿತ್ಯ ಅಪೂರ್ವವಾಗಿತ್ತು. ಮೊದಲಿದ್ದ ಭಕ್ತಿ ಕಲ್ಪನೆಗಿಂತ ಇಲ್ಲಿಯ ಭಕ್ತಿ ತುಂಬ ಭಿನ್ನವಾಗಿತ್ತು. ಶರಣರು ವಚನ ಮಾಧ್ಯಮದ ಮೂಲಕ ಭಕ್ತಿಗೆ ಹೊಸ ವಾಖ್ಯಾನವನ್ನೇ ನೀಡಿದರು. ಅಂದರೆ ಸ್ಥಾವರವನ್ನು ಬಿಟ್ಟು ಜಂಗಮಕ್ಕೆ ದೊಡ್ಡ ಸ್ಥಾನ ನೀಡಿದುದು ವಿಶೇಷ ಮತ್ತು ಮಹತ್ವದ್ದಾಗಿತ್ತು. ಹಾಗೆಯೇ ಕನ್ನಡ ಸಾಹಿತ್ಯದಲ್ಲಿ ಭಕ್ತಿಯ ಸಾಹಿತ್ಯಕ್ಕೆ ಅದರದೆ ಆದ ಬಹು ದೊಡ್ಡ ಘನತೆ, ಸ್ಥಾನವಿದೆಯೆಂಬುದರಲ್ಲಿ ಅರ್ಥವಿದೆ.

ಭಕ್ತಿ ಭಂಡಾರಿ ಎಂದೇ ಪ್ರಸಿದ್ಧರಾದ ಬಸವಣ್ಣನವರ ಮುಂದಾಳತ್ವದಲ್ಲಿ ಅನೇಕ ಶರಣ, ಶರಣೆಯರು ವಚನಗಳನ್ನು ಹೊಸೆಯುತ್ತ ತಮ್ಮ ನಿಷ್ಠೆಯ ಭಕ್ತಿಗೆ ಮಾತಿನ

ನುಡಿಗಳನ್ನು ನೀಡಿದರು. ಇದು ಕನ್ನಡ ಸಾಹಿತ್ಯಕ್ಕೆ ಹೊಸ ಮಾದರಿಯಾಗಿತ್ತು. ಸಾಲದಕ್ಕೆ ಕನ್ನಡ ವಚನ ಸಾಹಿತ್ಯ ತನ್ನ ಮೂಲಕ ಸಮಾಜದಲ್ಲಿ ಹೊಸ ಕ್ರಾಂತಿಯನ್ನು ಮಾಡುವುದರ ಜೊತೆಗೆ ಹೊಸ ಸಂಚಲನವನ್ನೇ ಸೃಷ್ಟಿಸಿತು.

ಅರಮನೆಗೆ ಮಾತ್ರ ಸೀಮಿತವಾಗಿದ್ದ ಅಕ್ಷರ ಜ್ಞಾನವನ್ನು ಶರಣರು ಮೊದಲ ಬಾರಿಗೆ ಶ್ರೀಸಾಮಾನ್ಯನಿಗೂ ತಲುಪಿಸುವ ಕಾರ್ಯ ಮಾಡಿದುದು ಅವರ ಹೆಚ್ಚುಗಾರಿಕೆಯಾಗಿದೆ. ಜೊತೆಗೆ ಹೊಸ ಪ್ರಜ್ಞೆಯನ್ನು ಮೂಡಿಸಿದ್ದಲ್ಲದೆ ನಿಜ ಭಕ್ತಿಯ ಮಾರ್ಗವನ್ನು ತೋರಿಸಿದ್ದು ಮತ್ತೊಂದು ವಿಶೇಷವಾಗಿತ್ತು. ಇದು ಮಧ್ಯಮ ವರ್ಗಕ್ಕೆ ಮತ್ತು ಕೆಳವರ್ಗಕ್ಕೆ ಹೊಸ ಆಶಾಕಿರಣವಾಗಿತ್ತು. ಅಂತೆಯೇ ಸ್ವಾಭಿಮಾನದಿಂದ ಬದುಕುವ ವಾತಾವರಣ ನಿರ್ಮಾಣವಾಯಿತು. ಇದರಿಂದಾಗಿ ಎಲ್ಲ ವರ್ಗದ ಶರಣ, ಶರಣೆಯರು ಕೀಳರಿಮೆಯಿಂದ ಆಚೆಬಂದು ಅಲ್ಲಿಯವರೆಗೂ ತಡೆಹಿಡಿದಿದ್ದ ಎಲ್ಲ ಜೀವನಾಮೃತವನ್ನು ವಚನಗಳ ಮೂಲಕ ಹೊರ ಹಾಕಿದ್ದು ತುಂಬಾನೆ ವಿಶೇಷವಾಗಿತ್ತು.

ಲೋಕರುಚಿ ಭಿನ್ನವೆಂಬಂತೆ ಎಲ್ಲ ಶರಣ, ಶರಣೆಯರ ಲೋಕದೃಷ್ಟಿ ವೈವಿಧ್ಯಮಯವಾಗಿತ್ತು. ಶರಣರ ಒಂದು ಗುಂಪು ಮೃದುವಾಗಿ ಸಮಾಜಕ್ಕೆ ತಿಳಿಹೇಳಿದರೆ, ಇನ್ನು ಅನೇಕ ಶರಣರು ತಮಗನಿಸಿದ್ದನ್ನು ಖಾರವಾಗಿ ಹೇಳಿದ್ದಾರೆ. ಮತ್ತಷ್ಟು ಶರಣ, ಶರಣೆಯರು ಪಾರಮಾರ್ಥಿಕದ ಮಹತ್ವವನ್ನು ತಿಳಿಸಿದ್ದಾರೆ. ಹೀಗೆ ಎಲ್ಲ ವರ್ಗದ ಶರಣರು ಒಮ್ಮೆಲೇ ವಚನ ರಚನೆಗೆ ಮುಂದಾಗುತ್ತಿದ್ದಂತೆಯೇ ಆ ಸಾಹಿತ್ಯಕ್ಕೆ ಮಹಾಪೂರವೇ ಬಂದಂತಾಯಿತು. ಆಗಲೇ ಅದು ಉತ್ತುಂಗ ಶಿಖರಕ್ಕೆ ಏರಿತೆಂದರೆ ತಪ್ಪಾಗದು.

ಶರಣರು ಕಾಯಕದಲ್ಲಿ ದೇವರನ್ನು ಕಂಡದ್ದು ಎಲ್ಲ ಸಾಮಾಜಿಕರಿಗೂ ಮೆಚ್ಚುಗೆಯಾಗಿತ್ತು. ಅಂತೆಯೇ ಎಲ್ಲ ಶರಣ, ಶರಣೆಯರು ತಮ್ಮ ಕಾಯಕಕ್ಕೆ ಪ್ರಾಧಾನ್ಯತೆಯನ್ನು ಕೊಡುತ್ತ, ಪಾರಮಾರ್ಥಿಕದ ಮಹತ್ವವನ್ನು ತಿಳಿಸುತ್ತ, ಸಮಾಜವನ್ನು ಎಚ್ಚರಿಸಿದವರಾಗಿದ್ದಾರೆ. ಶರಣರ ನಡೆ ನುಡಿ ಒಂದೇ ಆಗಿತ್ತು. ಅಂದರೆ ಬದುಕಿದಂತೆ ಬರೆದರು ಬರೆದಂತೆ ಬದುಕಿದರು. ತುಂಬ ನಿಷ್ಠುರತೆಯಿಂದ ನಡೆದುಕೊಂಡರು. ಬೇಡಾದ ವಿಷಯಕ್ಕೆ ಶರಣರು ಎಂದಿಗೂ ರಾಜಿಮಾಡಿಕೊಂಡವರೇ ಅಲ್ಲ. ಅದಕ್ಕಾಗಿಯೇ ಅವರು 'ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದೇ ಬಪ್ಪದು ನಮಗೀಗಲೇ ಬರಲಿ' ಎಂಬ ಧೈರ್ಯವನ್ನು ತೋರಿದವರಾಗಿದ್ದಾರೆ. ಮರಣವನ್ನೇ ಮಹಾನವಮಿ ಎಂದುಕೊಂಡವರಾಗಿದ್ದಾರೆ. ಇದಕ್ಕೆ ಉದಾಹರಣೆಯನ್ನು ಜನಪದರ ನುಡಿಮುತ್ತಿನಿಂದ ಅರಿಯಬಹುದಾಗಿದೆ. 'ಶರಣರನ್ನು ಮರಣದಲ್ಲಿ ಕಾಣು' ಎಂದಿದೆ. ಅಂದರೆ ಅವರ ಅಂತ್ಯ ಸಂಸ್ಕಾರದಲ್ಲಿ ಜನಸಾಗರವೇ ತುಂಬಿರುತ್ತಿತ್ತು. ಕಾರಣ ಆ ಜನಸಾಗರವನ್ನು ಶರಣರು ಒಂದೇಯಾಗಿ ಕಂಡು ಒಮ್ಮನಸಿನಿಂದ ಹರಿಸಿದುದನ್ನು ಮರೆಯುವಂತಿಲ್ಲ.

ವಚನ ಸಾಹಿತ್ಯ ಶ್ರೀಸಾಮಾನ್ಯನಿಗೂ ನೀತಿಬೋಧೆಯಾಗಿತ್ತು. ಸತ್ಯ, ಕಾಯಕ, ಮಾನವೀಯತೆ, ಅನುಕಂಪ ಮುಂತಾದ ಆದರ್ಶ ತತ್ವಗಳನ್ನು ವಚನ ಸಾಹಿತ್ಯ ತನ್ನಲ್ಲಿ ಆವಿರ್ಭವಿಸಿಕೊಂಡಿತ್ತು. ಅದಕ್ಕಾಗಿಯೇ ಅದು ಎಲ್ಲರ ಪ್ರೀತಿ, ವಿಶ್ವಾಸ ಮುಂತಾದವುಗಳನ್ನು ಗಳಿಸುವಲ್ಲಿ ಸಫಲವಾಗಿತ್ತು. ಬಸವಣ್ಣವರು ಸ್ಥಾಪಿಸಿದ ವೀರಶೈವಧರ್ಮ ಪ್ರಾರಂಭದಲ್ಲಿಯೇ ಅದು ಸಾಮಾಜಿಕರ ಆಶೋತ್ತರಗಳಿಗೆ ಸ್ಪಂದಿಸಿತು. ಅಂತೆಯೇ ಹೊಸ ಸಂಚಲನವನ್ನೇ ಮಾಡಿತ್ತು. ಇದೆಲ್ಲವು ವೈದಿಕ ಆಚರಣೆಯಲ್ಲಿರುವವರಿಗೆ ಆಶ್ಚರ್ಯವನ್ನುಂಟುಮಾಡಿತು. ಅಂದರೆ, ತಮ್ಮ ಧರ್ಮಕ್ಕೆ ಉದಾರ ಕೊಡುಗೆ ಇದ್ದಾಗಲೂ ಜನರಿಂದ ಅದು ಏಕೆ

ದೂರಸರಿಯಿತೆಂದು ಆತ್ಮಾವಲೋಕನ ಮಾಡಿಕೊಂಡಾಗ ತಮ್ಮ ತಪ್ಪುಗಳೆಲ್ಲ ಎದ್ದು ಕಂಡವು. ತಾವೆಂದೂ ಶ್ರೀಸಾಮಾನ್ಯನಿಗೆ ಸಾಹಿತ್ಯ ರಚಿಸಲಿಲ್ಲವೆಂಬುದು ತಿಳಿಯಿತು. ಜೊತೆಗೆ ನೆಲದ ಭಾಷೆಯಲ್ಲಿ ಕಾವ್ಯವನ್ನು ಬರೆಯದೇ ಸಂಸ್ಕೃತದಲ್ಲಿ ಬರೆದುದು ಮತ್ತೊಂದು ಕಾರಣವಾಗಿತ್ತು. ಮತ್ತು ತಾವೆಲ್ಲ ಬರೆದುದು ಅರಮನೆಗೆ ಹಾಗೂ ಪ್ರಕಾಂಡ ಪಂಡಿತರನ್ನು ಮೆಚ್ಚಿಸಲಿಕ್ಕೆಂಬ ಸತ್ಯ ತಿಳಿಯಿತು. ಆದರೆ ವಚನ ಸಾಹಿತ್ಯ ತನ್ನಲ್ಲಿಯ ಮಾನವೀಯತೆ, ಉದಾರತೆ ಮುಂತಾದ ಆದರ್ಶ ಗುಣಗಳಿಂದ ಎಲ್ಲರಿಗೂ ಮೆಚ್ಚುಗೆಯಾಗಲಿಕ್ಕೆ ಕಾರಣವಾಗಿದ್ದನ್ನು ತಿಳಿದರು.

ಆದರೆ, ಶರಣರ ಆಶಯಗಳಂತೆ ತಮ್ಮ ಎಲ್ಲ ಆಶಯಗಳನ್ನು ಬದಲಿಸಿಕೊಳ್ಳುವುದು ವೈದಿಕರಿಗೆ ಸಾಧ್ಯವಾದ ಮಾತಾಗಿರಲಿಲ್ಲ. ಅದಕ್ಕಾಗಿ ಇದ್ದುದರಲ್ಲಿಯೇ ಕೆಲವೊಂದು ಬದಲಾವಣೆ ಮಾಡಿಕೊಂಡರು. ಸ್ಥಳೀಯ ಭಾಷೆಯಾದ ಕನ್ನಡವನ್ನೇ ಮಾಧ್ಯಮವನ್ನಾಗಿಸಿಕೊಂಡು, ನೀತಿಬೋಧೆ, ಹರಿಸ್ತುತಿ, ಪಾರಮಾರ್ಥಿಕದಂತಹ ವಿಷಯಗಳನ್ನು ಬರೆಯತೊಡಗಿದರು. ಮುಂದೆ ಅದೇ ದಾಸ ಸಾಹಿತ್ಯವಾಗಿ ಗುರುತಿಸಿಕೊಂಡಿತು. ಇದನ್ನು ಮೊದಲಿಗೆ ವ್ಯವಸ್ಥಿತವಾಗಿ ಪ್ರಾರಂಭಿಸಿದವರು ನರಹರಿತೀರ್ಥರು ಹಾಗೂ ಶ್ರೀಪಾದರಾಯರೆಂದು ಬಹು ವಿದ್ವಾಂಸರ ಅಭಿಮತವಾಗಿದೆ. ಮುಂದೆ ಈ ದಾಸ ಸಾಹಿತ್ಯವನ್ನು ಅನೇಕ ಹರಿದಾಸರು ಸೇರಿ ಶ್ರೀಮಂತಗೊಳಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಅಶ್ವಿನಿ ದೇವತೆಗಳೆಂದೇ ಹೆಸರಾದ ಪುರಂದರದಾಸರನ್ನು ಮತ್ತು ಕನಕದಾಸರನ್ನು ಮರೆಯುವಂತಿಲ್ಲ. ಪುರಂದರ ದಾಸರು ಕರ್ನಾಟಕ ಸಂಗೀತದ ಹುಟ್ಟಿಗೆ ಕಾರಣರಾಗಿದ್ದಲ್ಲದೇ ಅನೇಕ ಕೀರ್ತನೆಗಳನ್ನು ರಚಿಸಿ ಹೆಸರಾಗಿದ್ದಾರೆ. ಹಾಗೆಯೇ ಕನಕದಾಸರು ಕವಿಗಳಲ್ಲಿ ದಾಸರಾಗಿ, ದಾಸರಲ್ಲಿ ಕವಿಗಳಾಗಿ ಪ್ರಮುಖವಾದ ಕಾವ್ಯ ಕೃತಿಗಳನ್ನು ಮತ್ತು ಕೀರ್ತನೆಗಳನ್ನು ರಚಿಸಿ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾರೆ.

ಮಧ್ಯಕಾಲೀನ ಕಾಲದಲ್ಲಿ ಜನ್ಮ ಪಡೆದ ವಚನ ಸಾಹಿತ್ಯ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಿದೆಂದರೆ ತಪ್ಪಾಗಲ್ಲ. ಅಂತೆಯೇ ದಾಸ ಸಾಹಿತ್ಯವೂ ಸಮಾಜದ ಕಣ್ಣು ತೆರೆಸುವಲ್ಲಿ ಹಿಂದೆ ಬಿದ್ದಿಲ್ಲವೆಂಬುದು ಅಷ್ಟೇ ಸತ್ಯವಾಗಿದೆ. ಶರಣರಿಗೆ ಹರನೇ ಏನೆಲ್ಲವಾಗಿ ತೋರಿದ್ದಾನೆ. ಆದರೆ ದಾಸರಿಗೆ ಹರಿಯೇ ಸರ್ವೋತ್ತಮನಾಗಿದ್ದಾನೆ. ವಚನ ಸಾಹಿತ್ಯ ಕೃಷಿಯು ಎಲ್ಲ ವರ್ಗದವರಿಂದ ನಡೆದಿದೆ. ಇತ್ತ ಕೀರ್ತನೆ ಸಾಹಿತ್ಯವನ್ನು ಶೂದ್ರವರ್ಗದಿಂದ ಬಂದ ಕನಕದಾಸರನ್ನು ಬಿಟ್ಟರೆ ಬಹುಶಃ ಉಳಿದವರೆಲ್ಲರೂ ಮೇಲ್ವರ್ಗದವರೇ ಇದ್ದಂತಿದೆ. ಕನ್ನಡ ಭಕ್ತಿ ಸಾಹಿತ್ಯ ಕಾಲಕಾಲಕ್ಕೆ ಹೊಸ ರೂಪವನ್ನು ಪಡೆದುಕೊಂಡು ಅನೇಕ ದಾರ್ಶನಿಕರಿಂದ ಬೆಳೆದು ಬಂದುದನ್ನು ಮರೆಯುವಂತಿಲ್ಲ. ವಚನ ಸಾಹಿತ್ಯ ಮತ್ತು ಕೀರ್ತನೆ ಸಾಹಿತ್ಯದ ಮುಂದುವರೆದ ಭಾಗವಾಗಿ ಹಾಗೂ ಅವುಗಳ ಪ್ರೇರಣೆ, ಪ್ರಭಾವದಿಂದ ತತ್ವಪದ ಸಾಹಿತ್ಯ ಬೆಳೆದು ಬಂದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಅದರಲ್ಲೂ ಕೀರ್ತನೆಗೆ ಹೋಲುವಂತಹ ತತ್ವಪದಗಳು ಗೇಯತೆ ಮತ್ತು ಅಮೃತದಂತಹ ಅನುಭಾವವನ್ನು ಹೊಂದಿವೆ.

ವಚನಕಾರರಂತೆ ತತ್ವಪದಕಾರರಿಗೆ ಯಾವುದೇ ಜಾತಿಯ ಗೊಡವೆ ಇಲ್ಲ. ವಿಭಿನ್ನ ಸಮುದಾಯದಿಂದ ಬಂದವರೂ ಈ ತತ್ವ ಪದಗಳನ್ನು ರಚಿಸಿದ್ದಾರೆ. ಅದರಲ್ಲಿ ಮುಖ್ಯವಾಗಿ ನಿಜಗುಣ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ ಮುಂತಾದವರನ್ನು ಕಾಣಬಹುದಾಗಿದೆ. ತತ್ವಪದಕಾರರದು ತುಂಬ ಸರಳ ವ್ಯಕ್ತಿತ್ವ. ಇವರಿಗೆ ಇಂತಹದೇ ವೇದಿಕೆ ಎಂಬುದಿಲ್ಲ. ಗುರು ಮನೆ ಮತ್ತು ಸಾವಿನ ಮನೆ ಎರಡನ್ನೂ ಒಂದೇಯಾಗಿ ಭಾವಿಸುತ್ತಾರೆ. ಕೈಯಲ್ಲಿ ಎರಡು ತಾಳ ಇದ್ದರೆ ಹೆಚ್ಚು. ಇಲ್ಲವೆ ಚಪ್ಪಾಳೆ ತಟ್ಟುವವರಿದ್ದರೂ ತತ್ವಪದಕಾರರು

ನಿರರ್ಗಳವಾಗಿ ಅನುಭಾವ ಸಾರದ ಹಿತನುಡಿಗಳನ್ನು ಹಾಡುವವರಾಗಿದ್ದಾರೆ. ಜಗತ್ತಿನ ಬಹುವಿಷಯಗಳನ್ನು ತುಂಬ ಸರಳವಾಗಿ ತಿಳಿಸಿಬಿಡುತ್ತಾರೆ. ಅವರ ಅನುಭಾವ ಜಗತ್ತು ತುಂಬಾ ಹಿರಿಯದಾಗಿದೆಂದರೆ ಅತಿಶಯೋಕ್ತಿ ಆಗಲಾರದು.

ಒಟ್ಟಾರೆ ಕನ್ನಡ ಭಕ್ತಿ ಸಾಹಿತ್ಯ ಜಗತ್ತಿನ ಭಕ್ತಿ ಸಾಹಿತ್ಯದಲ್ಲಿ ವಿಭಿನ್ನವಾಗಿ ಗುರುತಿಸಿಕೊಂಡುದಾಗಿದೆ. ಅದರ ಆಶಯಗಳು ಎಂದೆಂದಿಗೂ ಜಗತ್ತನ್ನು ಪೊರೆಯುವಂತಹದಾಗಿವೆ. ಇವನ್ನು ನಾವು ಸರಿಯಾಗಿ ಅರ್ಥಮಾಡಿಕೊಂಡರೆ ಪ್ರಸ್ತುತ ಕಾಲದ ಎಲ್ಲ ವೇದನೆಗಳಿಂದಲೂ ಹೊರಬರಬಹುದಾಗಿದೆ. ಭಕ್ತಿ ಸಾಹಿತ್ಯದಲ್ಲಿಯ ಬಹಳಷ್ಟು ಮಾನವೀಯ ಮೌಲ್ಯಗಳನ್ನು ನಾವು ನಮ್ಮ ಸಂವಿಧಾನದಲ್ಲಿ ಕಾಣಬಹುದಾಗಿದೆ. ಒಟ್ಟಾರೆ ಕನ್ನಡ ಭಕ್ತಿ ಸಾಹಿತ್ಯ ಎಲ್ಲ ಕಾಲಕ್ಕೂ ಸಲ್ಲುವಂತಹದಾಗಿದೆ ಎಂಬುದೇ ಅದರ ಹೆಚ್ಚುಗಾರಿಕೆಯಾಗಿದೆ.

**ವರ್ತಮಾನದ ತಲ್ಲಣಗಳು:**

ವರ್ತಮಾನದ ತಲ್ಲಣಗಳನ್ನು ಮಾತನಾಡುವದಕ್ಕೆ, ನೋಡುವುದಕ್ಕೆ, ಕೇಳುವುದಕ್ಕೆ ಮತ್ತು ಯೋಚಿಸುವುದಕ್ಕೆ ತುಂಬಾ ಭಯವಾಗುತ್ತದೆಂದರೆ ಅತಿಶಯೋಕ್ತಿಯಾಗಲಾರದು. ಯಾಕೆಂದರೆ ಅವು ಅಷ್ಟೊಂದು ಕ್ರೂರತನದಿಂದ ಕೂಡಿವೆಂಬುದೇ ನೋವಿನ ಸಂಗತಿಯಾಗಿದೆ.

ಈ ಜಗತ್ತಿಗೆ ತಲ್ಲಣಗಳೆಂಬವು ಹೊಸದಾಗಿಲ್ಲವೆಂಬುದು ನಿಜ. ಆದರೆ ವರ್ತಮಾನದ ತಲ್ಲಣಗಳು ತುಂಬ ಕ್ರೂರತೆಯಿಂದ, ಭೀಕರತೆಯಿಂದ, ಹಾಗೂ ರಕ್ತಬೀಜಾಸುರನಂತೆ ವರ್ತಿಸುತ್ತಿರುವುದು ಎಲ್ಲರಲ್ಲೂ ಮೈ ನಡುಕವನ್ನು ಹುಟ್ಟಿಸುವಂತಹದಾಗಿದೆ. ಇಂದು ಕೊಲೆ, ಪಾತಕಗಳು, ಸರ್ವೇಸಾಮಾನ್ಯವಾಗಿವೆ. ಮಾಧ್ಯಮಗಳ ಕಡೆ ಕಣ್ಣು, ಕಿವಿ ಹಾಯಿಸಿದರೆ ಸಾಕು ಸಾಲು ಸಾಲು ಸುದ್ದಿಗಳು ಇಂತಹವೇ ಆಗಿರುತ್ತವೆ.

ಕಾಲಬದಲಾಗಿದೆ ಆಧುನಿಕತೆ ಬಂದಿದೆ, ಹೊಸ ತಾಂತ್ರಿಕ ಮತ್ತು ವಿಜ್ಞಾನ ಕಾಲದಲ್ಲಿ ಬದುಕುತ್ತಿದ್ದೇವೆ. ಸಾಲದಕ್ಕೆ ಮನುಷ್ಯ ಹಿಂದಿಗಿಂತಲೂ ಇಂದು ಎಲ್ಲ ರಂಗದಲ್ಲೂ ಸಾಧನೆ ಮಾಡಿದ್ದಾನೆ. ಆದರೆ ಮಾನವೀಯ ಮೌಲ್ಯಗಳನ್ನೇ ಮರೆಯುತ್ತಿದ್ದಾನೆಂಬುದು ಖೇದದ ವಿಷಯವಾಗಿದೆ. ಎಲ್ಲ ಮನುಷ್ಯರು ಹೀಗೆ ಎಂದಲ್ಲ. ಒಳ್ಳೆಯವರು ಇದ್ದಾರೆ. ಆದರೆ ಅವರ ಸಂಖ್ಯೆ ತುಂಬ ವಿರಳವೆಂದೇ ಹೇಳಬೇಕಾಗುತ್ತದೆ. ಆದರ್ಶಗಳನ್ನು ಮರೆಯುವವರು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದಾರೆ. ಹಾಗಾಗಿಯೇ ಸಮಾಜದಲ್ಲಿ ಮಿತಿಮೀರಿದ ಕ್ಷೋಭೆಗಳನ್ನು ಕಾಣುತ್ತೇವೆ.

ಇಂದು ನಡೆಯುತ್ತಿರುವ ಅವಘಡಗಳನ್ನು ನೋಡಿದರೆ ಇಡೀ ಮಾನವ ಕುಲವೇ ತಲೆತಗ್ಗಿಸಬೇಕು. ಹಾಗಿವೆ ವಿಷಯಗಳು. ಒಂದೇ, ಎರಡೇ ಅವಕ್ಕೆ ಕೊನೆ ಎಂಬ ಯೋಚನೆ ಮತ್ತೆ ಮತ್ತೆ ಕಾಡುತ್ತದೆ. ಇಂದು ಮನುಷ್ಯರಲ್ಲಿ ಎಲ್ಲ ಸಂಬಂಧಗಳು ಹಳಸಿ ಬೆಲೆ ಕಳೆದುಕೊಳ್ಳುತ್ತ ಸಾಗಿವೆ. ಅದಕ್ಕೆ ಜಗತ್ತು ಹೆಚ್ಚು ಹೆಚ್ಚು ಕ್ರೂರವಾದಂತೆ ತೋರುತ್ತದೆ. ಅದು ಲೆಕ್ಕದ ಗೊಡವೆಗೆ ಸಿಗದೇ ತನ್ನ ಕಬಂಧ ಬಾಹುವನ್ನು ಹೆಚ್ಚಿಸುತ್ತಲೆ ಇದೆಂಬುದು ವಿಪರ್ಯಾಸದ ವಿಷಯವಾಗಿದೆ.

ಭ್ರೂಣ ಹತ್ಯೆ, ಬಾಲಮಕ್ಕಳ ಮೇಲೆ ನಡೆಯುವ ಅತ್ಯಾಚಾರ, ಕೊಲೆ, ಮಕ್ಕಳ ಕಳ್ಳ ಸಾಗಾಣಿ ಪಟ್ಟಿ ಬೆಳೆಯುತ್ತಲೆ ಹೋಗುತ್ತದೆ. ಮಹಿಳೆಯ ಮೇಲೆ ನಡೆಯುವ ದೌರ್ಜನ್ಯ, ವರದಕ್ಷಿಣೆ ಪಿಡುಗು, ಮೌಢ್ಯ ಆಚರಣೆಗಳು ಸ್ತ್ರೀ ಕುಲವನ್ನೇ ಕಿತ್ತು ತಿನ್ನುವಂತೆ ಭಾಸವಾಗುತ್ತದೆ. ಹೆಣ್ಣು, ಹೊನ್ನು, ಮಣ್ಣಿಗಾಗಿ ನಡೆಯುವ ಪಾತಕಗಳಿಗೆ ಕೊನೆಯೇ ಇಲ್ಲವೆನಿಸುತ್ತದೆ. ಕಾರಣ,

ಮನುಷ್ಯನ ಕಾಮನೆಗಳು ಮಿತಿಮೀರುತ್ತಲೇ ಸಾಗುತ್ತಿರುವುದರಿಂದ ಕ್ರೂರತೆ ಎಂಬುದು ಎಗ್ಗಿಲ್ಲದೆ ನಡೆಯುತ್ತದೆ. ತಾಯಿಯ ಹಾಲೇ ನಂಜಾದಂತೆ ಭಾಸವಾಗುತ್ತದೆ. ಮಾನವೀಯ ಮೌಲ್ಯಗಳು ಬೆಲೆ ಕಳೆದುಕೊಳ್ಳುವ ಹೊತ್ತಿನಲ್ಲಿ ಕಾನೂನಿಗೆ ಬೆಲೆ ಇಲ್ಲದಂತಾಗಿದೆ. ಯಾರೊ ಕೆಲವರಿಗೆ ಮಾತ್ರ ಶಿಕ್ಷೆಯಾಗಿ, ಉಳಿದೆಲ್ಲ ಭ್ರಷ್ಟರು ಕಾನೂನಿನ ಕಣ್ಣಿಗೆ ಮಣ್ಣು ಎರಚಿ ರಾಜಾರೋಷವಾಗಿ ಏನೂ ಮಾಡಿಲ್ಲವೇನೋ, ಏನೂ ಆಗಿಲ್ಲವೆಂಬಂತೆ ವರ್ತಿಸುತ್ತಿರುವುದು ಸಾರ್ವಜನಿಕರಿಗೆ ನುಂಗಲಾರದ ತುತ್ತಾಗುತ್ತಿದೆ.

ಹಾಗೆ ನೋಡಿದರೆ ಇಂದು ಭ್ರಷ್ಟಗೊಳ್ಳದ ಕ್ಷೇತ್ರವೇ ಇಲ್ಲ ಅನ್ನಿಸುತ್ತದೆ. ಸಮಾಜಕ್ಕೆ ಆದರ್ಶಗಳಾಗಬೇಕಾದ ಗುರು, ಸ್ವಾಮಿ, ರಾಜಕಾರಣಿ, ಕಲಾವಿದ, ಜ್ಯೋತಿಷಿ, ಮುಂತಾದವರು ಜೈಲಿಗೆ ಹೋಗಿ ಬರುವುದು ಹೊಸ ವಿಷಯಗಳೇ ಅಲ್ಲ ಎನ್ನಿಸಿವೆ. ಆಧುನಿಕ ಕಾಲದಲ್ಲಿ ಜಾತೀಯತೆ ಮಿತಿಮೀರುತ್ತಲೇ ಇದೆಂಬುದು ನಮ್ಮ ಕಣ್ಣ ಮುಂದಿನ ಸತ್ಯವಾಗಿದೆ. ಅದರಿಂದ ನಡೆಯುವ ಸಾವು, ನೋವುಗಳಿಗೆ ಲೆಕ್ಕವೇ ಇಲ್ಲ ಅನ್ನಿಸುತ್ತದೆ. ಇದರ ಮಧ್ಯೆ ಮರ್ಯಾದೆ ಹತ್ಯೆಗಳು ಸಮಾಜದ ನಿದ್ದೆಗೆಡಿಸಿವೆ. ಗರ್ಭಿಣಿ ಎಂಬುದನ್ನು ಮರೆತು ಅವಳ ಹೊಟ್ಟೆಯಲ್ಲಿ ಹುಟ್ಟಲಿರುವ ಕೂಸುಗಳ ಭವಿಷ್ಯವನ್ನೇ ಹುರಿದು ಮುಕ್ಕುತ್ತಿದ್ದಾರೆ. ಜಗತ್ತಿಗೆ ಅನ್ನದಾತನಾದ ರೈತನನ್ನು, ಕಾರ್ಮಿಕರನ್ನು, ಅಸಹಾಯಕರನ್ನು ಇಂದಿನ ವ್ಯವಸ್ಥೆ ಸಾವಿನ ದವಡೆಗೆ ಸರಿಸುತ್ತಿದೆ. ಇವರ ಸಾವು ನೋವುಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಸಮಾಜದಲ್ಲಿ ಅಸಮಾನತೆಯೆಂಬುದು ತಾಂಡವವಾಡುತ್ತಿದೆ. ಸಮಾಜದ ಕಟ್ಟಕಡೆಯವರಿಗೆ ಒಂದು ಹೊತ್ತಿನ ಗಂಜಿಗೂ ಭರವಸೆ ಇಲ್ಲದಂತಾಗಿದೆ. ಇನ್ನು ಅವರಿಗೆ ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ದೂರದ ಮಾತಾಗಿದೆ. ಹಾಗಂತ ಸರ್ಕಾರ ಅಸಹಾಯಕರಿಗೆ ಕೆಲಸ ಮಾಡಿಯೇ ಇಲ್ಲ ಎಂದಲ್ಲ, ಆದರೆ ಅದರ ಪ್ರಮಾಣ ಕಡಿಮೆ ಅನ್ನಿಸುತ್ತಿದೆ. ಕಾರಣ ಸರಕಾರದ ಯೋಜನೆಗಳನ್ನು ಜನಸಾಮಾನ್ಯರಿಗೆ ಮುಟ್ಟಿಸುವಲ್ಲಿ ಮಧ್ಯದಲ್ಲಿರುವ ಅಧಿಕಾರಿಗಳು ಭ್ರಷ್ಟರಾಗಿದ್ದಾರೆ. ಹಾಗಾಗಿ ಅಸಹಾಯಕ ವರ್ಗ ಮತ್ತಷ್ಟು ವೇದನೆಯನ್ನು ಪಡುತ್ತಲೇ ಸಾಗಿದೆ. ಸಮಾಜದಲ್ಲಿಯ ಪಟ್ಟಭದ್ರ ಹಿತಾಸಕ್ತಿಗಳು ಸಮಾಜವನ್ನು ನಿರಂತರವಾಗಿ ಒಡೆಯುತ್ತ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುತ್ತ ಅಲ್ಲೋಲ ಕಲ್ಲೋಲವನ್ನು ಸೃಷ್ಟಿಸುವುದು ತೀರ ಸಾಮಾನ್ಯವಾಗಿ ಬಿಟ್ಟಿದೆ. ಇದರಿಂದಾಗಿ ಲೆಕ್ಕವಿಲ್ಲದಷ್ಟು ಯುವಕರು ಬಲಿಯಾಗುತ್ತಿದ್ದಾರೆ. ರಕ್ಷಕರೇ ಭಕ್ಷಕರಾಗುವ ಈ ಹೊತ್ತಿನಲ್ಲಿ ಮನುಷ್ಯತ್ವವೇ ಬೆಲೆ ಕಳೆದುಕೊಂಡಿದೆ. ಸಮಾಜದ ಏಳಿಗೆ ಮಾಡಬೇಕಾದ ಅಧಿಕಾರಿಗಳು ಸಾಲು ಹಚ್ಚಿ ಜೈಲಿಗೆ ಹೋಗುತ್ತಿರುವುದು ನಾಚಿಕೆಗೇಡಿನ ವಿಷಯವಾಗಿದೆ. ದೇಶದಲ್ಲಿ ನಡೆಯುವ ಭಯೋತ್ಪಾದನೆ, ಲವ್ ಜಿಹಾದ್, ಮತಾಂತರ ಮುಂತಾದ ವಿಷಯಗಳಿಗೆ ಸಮಾಜ ನಲುಗಿ ಹೋಗುತ್ತಿದೆ.

ನೆಲ, ಜಲ, ಗಡಿ, ಭಾಷೆಗಳ ವಿಷಯವಾಗಿ ಸಾಮಾಜಿಕರು ಇನ್ನಿಲ್ಲದಂತೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆಧುನಿಕ ಕಾಲದಲ್ಲೂ ಮನುವಿನ ಮನಸ್ಥಿತಿಯವರು ಹೆಚ್ಚುತ್ತಲೇ ಇದ್ದಾರೆ. ಇವರು ಮಾಡುವ ಕಾರ್ಯತಂತ್ರಗಳಿಗೆ ಸಮಾಜ ಮತ್ತಷ್ಟು ತೊಂದರೆಯನ್ನು ಅನುಭವಿಸುವಂತಾಗಿದೆ. ಇನ್ನು ಬುಡಕಟ್ಟು ಸಮಾಜದ ತಾಪತ್ರಯಗಳು ನೂರಾರು. ಅವರ ಅಭದ್ರ ಬದುಕು ಎಂತಹವರನ್ನೂ ನೋವಿಗೆ ಒಳಗೊಳ್ಳುವಂತೆ ಮಾಡುವಂತಹದಾಗಿದೆ. ಇನ್ನು ಅಲೆಮಾರಿಗಳ ಸ್ಥಿತಿಯಂತೂ ಹೇಳುವಂತಿಲ್ಲ. ಅವರ ನೂರಾರು ಸಂಕಷ್ಟಗಳು ದೇವರಿಗೆ ಪ್ರೀತಿಯಾಗಿದೆ. ಸಮಾಜದ ಕಟ್ಟಕಡೆಯವರ ಸ್ಥಿತಿ ತುಂಬ ನೋವಿನದಾಗಿದೆ. ಕೈಗೆ ಕೆಲಸವಿಲ್ಲದ ಪರಿಸ್ಥಿತಿಯಲ್ಲಿ ಗುಳೆ ಹೋಗುವುದು ಅವರಿಗೆ ಅನಿವಾರ್ಯವಾಗಿ ಬಿಟ್ಟಿದೆ. ಒಟ್ಟಾರೆ ಅವರ ಭವಿಷ್ಯವೇ ಅತಂತ್ರದಲ್ಲಿದೆ.

ಒಟ್ಟಾರೆ ಸಮಾಜದಲ್ಲಿ ದಿನೇ ದಿನೇ ಅಸಮಾನತೆ ಹೆಚ್ಚುತ್ತ ಸಾಗಿದೆ. ಇಂತಹ ಹೊತ್ತಿನಲ್ಲಿ ಸಾಮಾಜಿಕರ ಮನಸ್ಸು ಎಷ್ಟು ಮಲೀನವಾಗಿದೆಂದರೆ ಹೇಳುವುದು ಬೇಡ ಎನಿಸುತ್ತದೆ. ಬೇಡಾದವರ ಹೆಸರನ್ನು ಕೆಡಿಸಲಿಕ್ಕೆ ನೀರಿನ ಟ್ಯಾಂಕ್‌ಗಳಲ್ಲಿ ವಿಷ ಬೆರೆಸುವುದು, ಜಾತ್ರಾ ಪ್ರಸಾದದಲ್ಲಿ ವಿಷ ಸೇರಿಸುವ ಘಟನೆ ನಡೆಯುತ್ತವೆ. ಇದರಿಂದಾಗಿ ಊರಿನ ಅದೆಷ್ಟೋ ನಾಗರಿಕರು ಪ್ರಾಣವನ್ನು ಕಳೆದುಕೊಂಡಿದ್ದಾರೆ. ದೇವರ ಹೆಸರಿನಲ್ಲಿ ಪ್ರಾಣಿ ಬಲಿ ಕೊಡುವ ಕಾರ್ಯಗಳು ಸರಕಾರದ ಕಣ್ಣು ತಪ್ಪಿಸಿ ನಡೆಯುತ್ತಲೇ ಇವೆ. ಮೌಢ್ಯ ಆಚರಣೆ, ಕಂದಾಚಾರಗಳು ಮುಂದುವರೆಯುತ್ತಲೇ ಬರುತ್ತಿರುವುದು ಯೋಚಿಸುವ ವಿಷಯಗಳಾಗಿವೆ.

ಮಕ್ಕಳ ನಿರ್ಲಕ್ಷ್ಯಕ್ಕೆ ಗುರಿಯಾದ ವಯೋವೃದ್ಧರು ವೃದ್ಧಾಶ್ರಮ ಸೇರುವುದು ದಿನೇದಿನೇ ನಡೆಯುತ್ತಲೇ ಇದೆ. ಅನ್ನದಾತನ ಪೈರಿಗೆ, ರಾಶಿಗೆ, ಬಣವಿಗಳಿಗೆ ಬೆಂಕಿ ಇಡುವ ಹೀನ ಮನಸ್ಸುಗಳು ಸಮಾಜದಲ್ಲಿರುವುದು ಅತಿ ನೋವಿನ ಸಂಗತಿಯಾಗಿದೆ. ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧಗಳು ಶ್ರೀಮಂತ ರಾಷ್ಟ್ರಗಳಿಗೆ ಪ್ರತಿಷ್ಠೆಯ ವಿಷಯಗಳಾಗಿವೆ. ಆದರೆ ಸಣ್ಣ ದೇಶಗಳಿಗೆ ಮಧ್ಯಮ ವರ್ಗದ ದೇಶಗಳಿಗೆ ಇದು ಶಾಪವಾಗಿದೆ. ಈ ಯುದ್ಧಗಳಿಂದಾಗಿ ಜಗತ್ತಿನ ಬಹಳಷ್ಟು ಸಾಮಾಜಿಕರು ಕಂಡರಿಯದ ದುಃಖವನ್ನು ಅನುಭವಿಸುತ್ತಿದ್ದಾರೆ. ಏನೂ ಅರಿಯದ ಕಂದಮ್ಮಗಳು, ಅಸಹಾಯಕರು ಜೀವನವನ್ನು ಕಳೆದುಕೊಳ್ಳುತ್ತಿರುವುದು ವೇದನೆಯ ಸಂಗತಿಗಳಾಗಿವೆ.

ಒಟ್ಟಾರೆ ವರ್ತಮಾನದ ಕಾಲದಲ್ಲಿಯ ತಲ್ಲಣಗಳು ಸಾಮಾಜಿಕರ ನಿದ್ದೆಗೆಡಿಸಿವೆ. ಇಲ್ಲಿ ಕ್ರೂರತನದ ಪಾಲೇ ಹೆಚ್ಚಿದೆ. ಅದಕ್ಕಾಗಿ ಜಗತ್ತಿನಲ್ಲಿರುವ ಎಲ್ಲ ಜೀವ ಸಂಕುಲ ಕ್ಷಣ ಕ್ಷಣಕ್ಕೂ ಆತಂಕಪಡುತ್ತ, ಬದುಕಿನ ಹೋರಾಟ ನಡೆಸಿದಂತೆ ತೋರುತ್ತದೆ. ಇಂತಹ ಆಪತ್ತಿನಿಂದ ಜಗತ್ತು ಆಚೆ ಬರಬೇಕೆಂದರೆ ಎಲ್ಲೆಲ್ಲೂ ಸೌಹಾರ್ದತೆ ಕಾಣಬೇಕು. ಆಗಲೇ ಜಗತ್ತಿಗೆ ನೆಮ್ಮದಿ ಇದೆ. ಮತ್ತು ಭವಿಷ್ಯವೂ ಇದೆ ಎನಿಸುತ್ತದೆ. ಯುದ್ಧ, ಕ್ರೂರತೆ, ಅಸಮಾನತೆ ಮುಂತಾದವುಗಳು ಸೃಷ್ಟಿಸುವುದು ತಲ್ಲಣಗಳನ್ನೇ ಹೊರತಾಗಿ ಶಾಂತಿಯನ್ನಲ್ಲ. ಆದ್ದರಿಂದ ಇಂದು ಜಗತ್ತಿನ ಎಲ್ಲ ಮಾನವ ಸಂಕುಲ ದಾರ್ಶನಿಕರ ಮೌಲ್ಯಗಳ ಜೊತೆ ಅನುಸಂಧಾನ ನಡೆಸಬೇಕು. ಆಗ ಎಲ್ಲೆಲ್ಲೂ ಒಳ್ಳೆಯದನ್ನು ಕಾಣಲು ಸಾಧ್ಯವೆಂದರೆ ಅತಿಶಯೋಕ್ತಿಯಾಗಲಾರದು.

**ಪರಾಮರ್ಶನ ಗ್ರಂಥಗಳು:**

1. ಅಮರೇಶ ನುಗಡೋಣಿ (ಸಂಪಾದಕರು), ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ನಿಜಲಿಂಗಪ್ಪ ಮಟ್ಟಿಹಾಳ, ವಚನ ಚಳುವಳಿಯ ಬೀಜರೂಪ, ಮಾದರ ಚೆನ್ನಯ್ಯ.
3. ಅಮರೇಶ ನುಗಡೋಣಿ, ವಚನಗಳ ಅನುಸಂಧಾನ.
4. ರಾಜೇಂದ್ರ ಚೆನ್ನಿ, ಆಯ್ದ ವಿಮರ್ಶಾ ಲೇಖನಗಳು, ಸಾಗರ: ಅಕ್ಷರ ಪ್ರಕಾಶನ.
5. ಬಸವರಾಜು ಎಲ್. (ಸಂಪಾದಕರು), (1970), ದೇವರ ದಾಸಿಮಯ್ಯನ ವಚನಗಳು, ಮೈಸೂರು: ಗೀತಾ ಬುಕ್ ಹೌಸ್.